## ಬೌದ್ಧಿಕ ದಿವಾಳಿತನ

ಸಾಯಂಕಾಲ 6ರ ನಂತರ ರಾತ್ರಿ 10.30ರವರೆಗೂ ಅಂತ್ಯ ಕಾಣದ ಕನ್ನಡ ಧಾರಾವಾಹಿಗಳನ್ನು ನೋಡಿ ನೋಡಿ ವಾಕರಿಕೆ ಬರುತ್ತದೆ. ಬರುಬರುತ್ತಾ ಕನ್ನಡ ಧಾರಾವಾಹಿಗಳು ಬೌದ್ಧಿಕ ದಿವಾಳಿತನವನ್ನು ತೋರಿಸುತ್ತಿವೆ ಎಂದು ಯಾವ ಸಂಕೋಚವಿಲ್ಲದೆ ಹೇಳಬಹುದು. 'ರಾಧಾ ರಮಣ' ಧಾರಾವಾಹಿಯಲ್ಲಿ ಏಕೆ ರಮಣನು ಒಂದೊಂದು ದೃಶ್ಯ ಪೂರ್ಣವಾದಾಗಲೂ ರಾಧೆಯ ಮೂಗನ್ನು ಹಿಡಿದು, ನಂತರ ಎರಡು ಬೆರಳುಗಳನ್ನು ಕಮಾನಿನ ಆಕಾರವಾಗಿ ಹಿಡಿದು ತೋರಿಸುತ್ತಾನೆ? ಹಾಗೆ ಮಾಡಲು ರಾಧೆಯು ಒಂದು ಮಗುವೆ? ಈ ಸಂಕೇತ ಅಸಹ್ಯ ಎನಿಸುತ್ತದೆ.

–ಎಸ್. ಸುಂದರ, ಬೆಂಗಳೂರು

## ಕಥೆಗೆ ಎಷ್ಟೊಂದು ತಿರುವು?

ಕನ್ನಡ ಕಲರ್ಸ್ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ 'ಅಗ್ನಿಸಾಕ್ಷಿ' ಆನೆ ನಡೆದಿದ್ದೇ ದಾರಿ ಎಂಬಂತೆ ಪ್ರಸಾರವಾಗುತ್ತಿದೆ. ಧಾರಾವಾಹಿಯ ಮೂಲ ಕಥೆಯನ್ನು ಮರೆತು ತಮಗೆ ತೋಚಿದ್ದನ್ನು ಕಥೆಗಾರರು ವೀಕ್ಷಕರಿಗೆ ಉಣಬಡಿಸುತ್ತಿದ್ದಾರೆ ಎಂದರೆ ತಪ್ಪಾಗಲಾರದು. ಮುಂಚೆ ಕಥೆಯಲ್ಲಿ ಚಂದ್ರಿಕಾಳ ಅಕ್ಕ ರಾಧಿಕಾ ಸತ್ತುಹೋಗಿದ್ದಳು. ಆಗ ರಾಧಿಕಾಳ ಮಗಳನ್ನು ಚಂದ್ರಿಕಾ ರಹಸ್ಯವಾಗಿ ಬಚ್ಚಿಟ್ಟು ಗಂಡ ಹಾಗೂ ರಾಧಿಕಾಳನ್ನು ಬೇರೆ ಬೇರೆ ಕಡೆಯಲ್ಲಿ ಕೂಡಿಹಾಕಿ ಹಿಂಸೆ ಕೊಡುತ್ತಿದ್ದಳು. ಮಧ್ಯೆ ಗಂಡ ಸತ್ತ ನಂತರ ರಾಧಿಕಾ ದುಷ್ಟರ ಕೈಯಿಂದ ಪಾರಾಗಿ ಸಿದ್ಧಾರ್ಥನ ಮನೆ ಸೇರಿಕೊಂಡಳು. ಈಗ ಇದ್ದಕ್ಕಿದ್ದಂತೆ ರಾಧಿಕಾಳ ತಾಯಿ 'ರಾಧಿಕಾ ಬದುಕಿ ಬಂದಿದ್ದಾಳೆ. ಅಲ್ಲದೆ ಅವಳಿಗೆ ಅವಳಿ–ಜವಳಿ ಮಕ್ಕಳು' ಎನ್ನುತ್ತಾಳೆ.

ಇದು ಒಂದು ರೀತಿ ಹೊಸ ಕಥೆಯಾದರೆ ಕಿಶೋರ್ ತಮ್ಮನನ್ನು ಇನ್ನೂ ರಹಸ್ಯವಾಗಿ ಮುಖ ತೋರಿಸದೆ ಚಿತ್ರಿಸುತ್ತಿರುವುದು. ಅವನು ಕಿಶೋರ್ ತಮ್ಮ ಕೌಶಿಕ್ ಎಂದು ತಿಳಿದ ಮೇಲೂ ರಹಸ್ಯವಾಗಿ ಇಡುವ ಪ್ರಮೇಯ ಅರ್ಥವಾಗಲಿಲ್ಲ. ಇದು ಸಾಲದೆಂಬಂತೆ ಸಿದ್ಧಾರ್ಥನ ಕಣ್ಮರೆ, ದುಷ್ಟ ಚಂದ್ರಿಕಾಳ

ವಾರದ ಪತ್ರ

## ಸತ್ಯ ನಿಗೂಢ ಆಗಬಾರದು

ಮಾಸ್ಟರ್ ಆನಂದ್ ನಿರ್ದೇಶನದ 'ನಿಗೂಢ ರಾತ್ರಿ' ಬಹಳ ಚೆನ್ನಾಗಿ ಮೂಡಿಬರುತ್ತಿದೆ. ಆದರೆ ಕಥೆಯ ಉದ್ದೇಶದ ಬಗ್ಗೆ ಗೊಂದಲವಿರುವಂತೆ ಕಾಣುತ್ತದೆ. ಏನನ್ನು ಹೇಳಲು ಬಯಸುತ್ತಾರೋ ತಿಳಿಯುತ್ತಿಲ್ಲ. ಮೂಢ ನಂಬಿಕೆಗಳನ್ನು ಪ್ರೋತ್ಸಾಹಿಸುತ್ತಾರಾ ಅಥವಾ ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ಲೇಷಿಸಿ ಸತ್ಯವನ್ನು ಅನಾವರಣಗೊಳಿಸುತ್ತಾರಾ?

ಸುರೇಖಾ, ಮಾಧವ, ರಘುರಾಮ, ರಾಕಿ ಇವರೆಲ್ಲ ಒಂದಾಗಿ ಉಳಿದವರ ಕಣ್ಣು ತೆರೆಸುತ್ತಾರೆ ಎಂದುಕೊಂಡಿದ್ದರೆ, ಅವರೂ ಮೂಢ ನಂಬಿಕೆಗೆ ಬಲಿಯಾಗುತ್ತಿದ್ದಾರೆಂದು ತೋರುತ್ತಿದೆ. ಅಸಂಗತ ಘಟನೆಗಳನ್ನು ಒಂದಾದ ನಂತರ ಒಂದು ತೋರಿಸುತದ್ದಾರೆಯೇ ಹೊರತು ಯಾವುದು ಹೇಗೆ ನಡೆದಿರಬಹುದು ಎಂದು ತಿಳಿಸುವ ಪ್ರಯತ್ನವನ್ನೇ ಮಾಡುತ್ತಿಲ್ಲ. ಹೀಗೇ ಮುಂದುವರಿದರೆ ನಮ್ಮ ಕುತೂಹಲ, ಕಾತರ ಉಳಿಯಲಾರದು.

–ಮೀರಾ ವಲ್ಲಭ್

ಸಹಾಯಕ್ಕೆ ಇನ್ನೊಬ್ಬಾಕೆಯ ಪ್ರವೇಶ. ಪಿತೂರಿಯಂತಹ ಅವರ ಮಾತುಗಳನ್ನು ಸಹಿಸಲು ಅಸಾಧ್ಯ.

–ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಶೀರ್ಷಿಕೆಗೆ ಬರ

ಧಾರಾವಾಹಿಗಳಿಗೆ ಕನ್ನಡ ಚಿತ್ರಗಳ ಹೆಸರುಗಳನ್ನು ಇಡುವ ಪದ್ಧತಿ ಶುರುವಾಗಿದೆ. ಇದೇ ರೀತಿ ಹಿಂದಿ ಚಿತ್ರಗಳ ಹೆಸರುಗಳನ್ನು ಕನ್ನಡ ಚಿತ್ರಗಳಿಗೆ ಇಡಲಾಗಿದೆ. ನಾವು ರೇಡಿಯೋ ಕೇಳುತ್ತಿದ್ದರೆ ಕೆಲವು ಹಿಂದಿ ಚಿತ್ರಗಳ ಹೆಸರುಗಳಾದ ತಾಜ್‌ಮಹಲ್, ಲೀಡರ್, ಪ್ರೇಮ್ ಕಹಾನಿ ಇತ್ಯಾದಿ ಕೇಳಿಬರುತ್ತವೆ. ಪ್ರಸಾರವಾಗುವ ಹಾಡುಗಳನ್ನು ಕೇಳಿದಾಗಲೇ ಅದು ಯಾವ ಭಾಷೆಯದು ಅಂತ ತಿಳಿಯುತ್ತದೆ. ಏಕೆ? ಕನ್ನಡ ಭಾಷೆಯನ್ನೇ ಬಳಸಿ ಚಿತ್ರಗಳಿಗೆ ನಾಮಕರಣ ಮಾಡಬಾರದೇ?

–ಬಿ.ಎಸ್. ರಮೇಶ್, ಬೆಂಗಳೂರು

## ಇದೆಲ್ಲಾ ಬೇಕೇ?

'ಜಾಣರ ಪೆಟ್ಟಿಗೆ' ಎಂದು ಹೆಸರು ಪಡೆದ ಟಿವಿಯಲ್ಲಿ ಪ್ರಸಾರವಾಗುತ್ತಿರುವ ಧಾರಾವಾಹಿಗಳನ್ನು ನೋಡುತ್ತಿದ್ದರೆ ನಿರ್ದೇಶಕರು ದಾರಿ ತಪ್ಪಿ, ಜೊತೆಗೆ ವೀಕ್ಷಕರನ್ನೂ ದಾರಿ ತಪ್ಪಿಸುತ್ತಿದ್ದಾರೆ. ನಿತ್ಯದ ಜಂಜಾಟಗಳನ್ನು ಮುಗಿಸಿ ಒಂದೆರಡು ಗಂಟೆ ಮನಸ್ಸನ್ನು ಉಲ್ಲಾಸಗೊಳಿಸಲು ಟಿ.ವಿ. ಮುಂದೆ ಕುಳಿತರೆ ಅದೇ ಮನೆ ಹಾಳು ಮಾಡುವ ಕುತಂತ್ರಿಗಳ ಕಾಟದ ಧಾರಾವಾಹಿಗಳು, ದಿನನಿತ್ಯ ನಡೆವ ಘಟನೆಗಳ ವಿಶ್ಲೇಷಣೆಗೆ ಕರೆಸಿದ ಗಣ್ಯರು ಎನಿಸಿಕೊಂಡವರು ತಮ್ಮ ಅನಿಸಿಕೆಗಳನ್ನು ಒಬ್ಬರು ಮುಗಿಸಿದ ನಂತರ ಪ್ರಾರಂಭಿಸಬೇಕೆಂಬ ಅರಿವೂ ಇಲ್ಲದೆ ಗುದ್ದಾಟಕ್ಕೆ ಇಳಿಯುವುದು, ಯಾರೊಬ್ಬರ ಮಾತು ಏನೆಂದು ಅರ್ಥವಾಗದಿರುವುದು. ಹಾಸ್ಯದ ಹೆಸರನ ಹುಚ್ಚಾಟ, ದ್ವಂದ್ವಾರ್ಥದ ಅಶ್ಲೀಲ ಸಂಭಾಷಣೆ– ಸನ್ನಿವೇಶಗಳಿಂದ ತಲೆ ಮತ್ತಷ್ಟು ಸಿಡಿದು ಹೋಗುತ್ತದೆ. ಇದು ಬೇಕೇ?

–ಮೇ.ಗೋ ಸುಬ್ಬಣ್ಣ, ಮೇಗಾರವಳ್ಳಿ

## ಕೇಕ್ ಎಸೆಯಬೇಡಿ

'ಕಲರ್ಸ್ ಸೂಪರ್'ನ 'ಟಾಕ್ ಟೈಮ್' ಅಕುಲ್ ಬಾಲಾಜಿ ನಡೆಸಿಕೊಡುವ ಕಾರ್ಯಕ್ರಮ. ಬಡತನ ಹೆಚ್ಚಿರುವ ದೇಶ ನಮ್ಮದು. ಬಡ ಮತ್ತು ಅನಾಥ ಮಕ್ಕಳು ಕೇಕಿನ ಮುಖವನ್ನೆ ನೋಡಿರುವುದಿಲ್ಲ. ಕೆ.ಜಿ., ಅರ್ಧ ಕೆ.ಜಿ.ಯ ಹತ್ತು–ಹನ್ನೆರಡು ಕೇಕನ್ನು ಅರ್ಥವಿಲ್ಲದ ಪ್ರಶ್ನೆ ಕೇಳಿ ತಪ್ಪು ಉತ್ತರ ಹೇಳಿದಾಗ ಮುಖಕ್ಕೆ ಮೆತ್ತುವುದು, ಪರಸ್ಪರ ಎಸೆದಾಡಿ ಕಾಲಲ್ಲಿ ಹಾಕಿ ತುಳಿದಾಡುವುದು ಎಷ್ಟು ಸರಿ? ಚೆಲ್ಲುಚೆಲ್ಲಾದ ನಡವಳಿಕೆ, ಆಹಾರ ಪದಾರ್ಥ ಎಸೆದಾಡುವುದನ್ನು ನೋಡಿದರೆ ಸಂಕಟ ಎನಿಸುತ್ತದೆ.

ಪ್ರತಿಷ್ಠಿತ ವ್ಯಕ್ತಿಗಳನ್ನು ಕರೆಸಿ ಕಾಡುಹರಟೆ ಹೊಡೆಯುವ ಬದಲು ಅನಾಥಾಶ್ರಮ, ವೃದ್ಧಾಶ್ರಮ, ಅಬಲಾಶ್ರಮಗಳಿಗೆ ಭೇಟಿ ನೀಡಿ ಪರಿಸ್ಥಿತಿಯನ್ನು ಜನತೆಗೆ ಮನವರಿಕೆ ಮಾಡಿಸಿ ಪ್ರತಿಯೊಬ್ಬರಿಗೂ ಅರಿವು ಮೂಡುವ ಕೆಲಸ ಮಾಡಿದರೆ ಬದುಕು, ಹುಟ್ಟಿಗೂ ಒಂದು ಅರ್ಥ. ಅದೇ ಕೇಕನ್ನು ಅಲ್ಲಿ ಹಂಚಿದರೆ ಹಸಿದ ಹೊಟ್ಟೆ ತುಂಬದಿದ್ದರೂ ತಿಂದ ಮುಖಗಳಲ್ಲಿ ಕಾಣುವ ಖುಷಿ ನೋಡಿದರೆ ಜೀವನ ಸಾರ್ಥಕ.

–ರತ್ನ ಅಶೋಕ ಗೊರವರ

## ಪುರಾಣ ತಿರುಚಬೇಡಿ

ಝೀ ವಾಹಿನಿಯಲ್ಲಿ ಬರುವ 'ಡ್ರಾಮಾ' ಉತ್ತಮ ಕಾರ್ಯಕ್ರಮ. ಮಕ್ಕಳ ಸ್ಪಷ್ಟ ಉಚ್ಚಾರಣೆ ಹಾಗೂ ಅಸ್ಖಲಿತ ಸಂಭಾಷಣೆ ಮನಸ್ಸಿಗೆ ಮುದ ನೀಡುತ್ತದೆ. 'ಕರ್ಣ'ನ ಕುರಿತ ನಾಟಕದಲ್ಲಿ ವಜ್ರ ಕವಚವನ್ನು ಇಂದ್ರ ಬಂದು ತೆಗೆದುಕೊಳ್ಳುವುದು, ಮರಣಶಯ್ಯೆಯಲ್ಲಿರುವಾಗ ಕೃಷ್ಣ ಪರಮಾತ್ಮನು ಬಂದು ಕರ್ಣಕುಂಡಲವನ್ನು ದಾನವಾಗಿ ಬೇಡುವುದು, ಆಗ ಧಾರೆಯೆರೆಯಲು ಕರ್ಣನು ಎದೆಯಲ್ಲಿರುವ ಅಮೃತ ಕಳಶದಿಂದ ನೀರನ್ನು ಉಪಯೋಗಿಸು ಎಂದು ಹೇಳುವುದು ಪುರಾಣ. ಅದರೆ ನಾಟಕದಲ್ಲಿ ಈ ವಿಷಯವನ್ನು ತಿರುಚಲಾಗಿದೆ. ದಯವಿಟ್ಟು ಪುರಾಣ ತಿರುಚಬೇಡಿ.

–ಎ. ಗೋಪಾಲಯ್ಯ, ಚನ್ನಪಟ್ಟಣ

## ವಿಭಿನ್ನ 'ನಿಗೂಢ ರಾತ್ರಿಗಳು'

ಝೀ ವಿಭಿನ್ನ ಕಾರ್ಯಕ್ರಮಗಳಿಂದ ವೀಕ್ಷಕರನ್ನು ಗೆದ್ದಿದೆ. ಇದರ ಹೊಸ ಸೇರ್ಪಡೆ 'ನಿಗೂಢ ರಾತ್ರಿಗಳು'. ಇದು ಎಲ್ಲಾ ದೆವ್ವದ ಕಥೆಗಳಂತಿರದೆ ವಿಭಿನ್ನವಾಗಿ ಪ್ರತಿ ಸಂಚಿಕೆಯಲ್ಲೂ ಕೂತೂಹಲ ಕೆರಳಿಸುವಲ್ಲಿ ಸಫಲವಾಗಿದೆ. ಸುಂದರ ಪರಿಸರದಲ್ಲಿ ಚಿತ್ರೀಕರಣಗೊಂಡಿರುವ ಧಾರಾವಾಹಿ ನಟರೆಲ್ಲರೂ ಪಾತ್ರಗಳಾಗಿ ಮೈ ತಳೆದಿದ್ದಾರೆ. ಅದರಲ್ಲೂ ಪಾಂಡು ಎಲ್ಲರ ಮನ ಗೆದ್ದಿದ್ದಾನೆ. ಈ ವಿಭಿನ್ನ ಧಾರಾವಾಹಿಯನ್ನು ಕಟ್ಟಿಕೊಟ್ಟಿರುವ ಮಾಸ್ಟರ್ ಆನಂದ್‌ರವರ ತಂಡಕ್ಕೆ ನಮ್ಮ ಅಭಿನಂದನೆಗಳು.

–ಎನ್. ಗೀತಾ, ಬೆಂಗಳೂರು